**OS. No.54/2018** **PW –2**

ಪ್ರಮಾಣೀಕರಿಸಲಾದ ದಿನಾಂಕಃ **05.07.2025.**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಎಸ್ ಕೆ ವಕೀಲರಿಂದಃ</u>

ನಾನು ಮತ್ತು ಪ್ರತಿವಾದಿಗಳು ಒಂದೇ ಕುಟುಂಬದವರು. ನಮ್ಮ ಕುಟುಂಬದ ಸರ್ವೆ ನಂಬರ್ ಆಸ್ತಿಗಳು ವಿಸ್ತೀರ್ಣ ಹೇಳಲು ಬರುವುದಿಲ್ಲ. ನಾನು ಒಬ್ಬನೇ ಮಗ. ನನಗೆ ಸರ್ವೆ ನಂ 12/1 - 3 ಎಕರೆ ನನ್ನ ತಂದೆಯ ಹೆಸರಿನಲ್ಲಿದೆ. ಈಗ ನನ್ನ ತಂದೆ ಇಲ್ಲ. ಸರ್ವೆ ನಂ 12/3 ರಲ್ಲಿ 1 ಎಕರೆ ಬಾಣೆ ಜಾಗ 1 ಎಕರೆ ಭೂಮಿಅಂದರೆ ಭತ್ರದ ಕೃಷಿ. ಈ ಜಮೀನು ನನ್ನ ಹೆಸರಿನಲಿಲ್ಲ, ಆರ್ ಟಿ ಸಿ ಆಗಿರುವುದಿಲ್ಲ, ಆದರೆ ನಾನು ನಮ್ಮ ಕುಟುಂಬದವರಿಂದ ನನ್ನ ತಂದೆ ತಿತೀರ ಬಿದ್ದಪ್ಪರವರಿಂದ ಖರೀದಿಸಿರುತ್ತಾರೆ , ಖರೀದಿಸಿದ ವರ್ಷ ಗೊತ್ತಿಲ್ಲ. ಕ್ರಯ ಪತ್ರ ದಾಖಲೆ ಇದೆ, ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಸರ್ವೆ ನಂ 12/1 ರಲ್ಲಿ 35.35 ಎಕರೆ ಬಾಣೆ ಜಾಗ ಇದೆ. ಈ ಸರ್ವೆ ನಂಬರ್ ನಲ್ಲಿ ನಮ್ಮ ಕುಟುಂಬದ ವಿಸ್ತೀರ್ಣ ಮತ್ತು ಸ್ವಾದೀನ ಬಗ್ಗೆ ನನಗ ಗೊತ್ತಿಲ್ಲ, ಆದರೆ ನಮ್ಮ ತಂದೆಗೆ 3 ಎಕರೆ ಸ್ವಾದೀನ ಇತ್ತು. ನಾವು ಕಾಫಿ ತೋಟ ಮಾಡಿರುತ್ತೇವೆ, ಕಂದಾಯ ಕಟ್ಟಿದ್ದರೂ ಇಲ್ಲವೋ ನನಗೆ ಗೊತ್ತಿಲ್ಲ.

ನಿ. ಪಿ. 2 ಕ್ರಯ ಪತ್ರ ತಿಳಿದುಕೊಂಡಿದ್ದೇನೆ. ಕ್ರಯ ಪತ್ರದಲ್ಲಿರುವ ಆಸ್ತಿಯ ಶೆಡ್ಯೂಲ್ ಅನ್ನು ನೋಡಿಲ್ಲ. ಕ್ರಯಪತ್ರದಲ್ಲಿ ಶೆಡ್ಯೂಲ್ ನಲ್ಲಿ ಖಾಲಿ ಜಾಗ ಎಂದು ತೋರಿಸಿದ್ದು ಎಂದು ಇದೆ ಅಂದರೆ ಸಾಕ್ಷಿಯು ಅದರಲ್ಲಿ ಕಾಫಿ ತೋಟವಿರುತ್ತದೆ ಎಂದು ಹೇಳುತ್ತಾರೆ. ನನ್ನ ತಂದೆಗೆ Provisional Coffee Registration Certificate ಇತ್ತು. 1995 ರಲ್ಲಿ ವಾದಿಗೆ ಮಾರಾಟ ಮಾಡುವಾಗ ನನ್ನ ತಂದೆಯ ಹೆಸರಿನಲ್ಲಿ ಜಮಾಬಂಧಿ ಇತ್ತು. 2009 ರಲ್ಲಿ ನಾನು ಸೇನೆಯಿಂದ ಹೊರಬಂದೆ. ನನಗೆ ತಿತೀರ ಪೂಣಚ್ಚ ಬಿನ್ ಕಾರ್ಯಪ್ಪ ಗೊತ್ತು. ಸರ್ವೆ ನಂ 12/1, ಸರ್ವೆ ನಂ 12/6 ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸರ್ವೆ ನಂ12/1 ಎಂದು ತಪ್ಪಾಗಿದ್ದು ನನ್ನ ತಂದೆ ಸರ್ವೆ ನಂ 12/6 ಎಂದು ಬರೆದುಕೊಡಬೇಕಾಗಿತ್ತು ಎಂದು ನಾನು ಹೇಳಿಲ್ಲ. ದಾವಾ ಸ್ವತ್ತು ವಾದಿಗಳ ಸ್ವಾದೀನದಲ್ಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.